**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ .ನಂಃ 41/ 2025**

**ಚಾಸಾ-1, ಪ್ರಾಸಾ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೌರಮ್ಮ |
| ಗಂಡನ ಹೆಸರು | : | ಜಗದೀಶ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಅಡಿಬೈಲು |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 21.07.2026**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಮಗ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಗಂಡ. ಚಾಸಾ-3 ರಿಂದ 5 ನಮ್ಮ ಗ್ರಾಮದವರು, ಅವರು ನನಗೆ ಗೊತ್ತು.

2. ಹೀಗೆ 20 ವರ್ಷಗಳ ಹಿಂದೆ ನನಗೆ ಆರೋಪಿಯೊಂದಿಗೆ ವಿವಾಹವಾಗಿದೆ. ನಮ್ಮ ದಾಂಪತ್ಯ ಜೀವನದಿಂದ ಇಬ್ಬರು ಮಕ್ಕಳು ಜನಿಸಿದ್ದಾರೆ. ಆರೋಪಿ ನನಗೆ ಯಾವುದೇ ತೊಂದರೆ ಕೊಟ್ಟಿಲ್ಲ. ಆರೋಪಿಯು ನನ್ನನ್ನು ಕೊಲೆ ಮಾಡುವ ಯಾವುದೇ ಪ್ರಯತ್ನ ಮಾಡಿಲ್ಲ. ಆರೋಪಿ ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿರುವುದಾಗಿ ಯಾವುದೇ ದೂರನ್ನು ನೀಡಿಲ್ಲ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ಈಗ್ಗೆ ಎರಡು ವರ್ಷಗಳ ಹಿಂದೆ ಯಾವುದೋ ಒಂದು ಊರು ಜಗಳಕ್ಕೆ ಸಂಬಂದಿಸಿದಂತೆ ಮಾಡಿದ್ದೇನೆ. ಸಾಕ್ಷಿಯು ದೂರಿನಲ್ಲಿರುವ ಸಹಿಯನ್ನು ತನ್ನದೆಂದು ಗುರುತಿಸಿದ ಮೇರೆಗೆ, ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ನನಗೆ ಹುಷಾರಿಲ್ಲದ ಕಾರಣ ಆಲೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದೆನು. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಸ್ಥಳ ಮತ್ತು ಅಮಾನತು ಮಹಜರ ಇದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಒಂದೂವರೆ ವರ್ಷದ ಹಿಂದೆ ಇನ್ಸಪೆಕ್ಟರ್ ಒಬ್ಬರು ಬಂದಾಗ ಮಾಡಿದ್ದೇನೆ. ಜಮೀನು ವಿಷಯಕ್ಕಾಗಿ ಪೋಲಿಸರು ಬಂದಾಗ ನನ್ನ ಸಹಿ ಪಡೆದಿದ್ದಾರೆ.

ಮೇಲ್ಕಂಡ ದಾಖಲೆಗಳಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದಾದರು ವಸ್ತುಗಳನ್ನು ಅಮಾನತುಪಡಿಸಿಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಈಗ ತೋರಿಸಿದ ಪೋಟೋಗಳಲ್ಲಿ ನನ್ನ ಭಾವಚಿತ್ರವಿದೆ. ಸಾಕ್ಷಿಗೆ ತೋರಿಸಿದ ಎರಡು ಭಾವಚಿತ್ರಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಟವಲ್ ನಮಗೆ ಸಂಬಂದಿಸಿದ್ದಲ್ಲ. ಸದರಿ ಟವಲನ್ನು ನಾನು ಇದುವರೆಗೂ ನೋಡಿಲ್ಲ. ಅದು ಯಾರಿಗೆ ಸಂಬಂದಿಸಿದ್ದು ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

4. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಓದಲು, ಬರೆಯಲು ಬರುತ್ತದೆ.

5. ನಾನು ದಿಃ 14.11.2024 ರಂದು ಆಲೂರು ಪೋಲಿಸ ಠಾಣೆಗೆ ದೂರು ನೀಡಿ ಸದರಿ ದೂರಿನಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿ ನನಗ ಅವಾಚ್ಯ ಶಬ್ದಗಳಿಂದ ಬೈಯುವುದು, ಹೊಡೆಯುವುದು, ಬೆದರಿಕೆ ಹಾಕುವುದು ಹಾಗೂ ತಾಳಿ ಕೊಡು ಇಲ್ಲವಾದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದನು ಎಂಬುದಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ದಿಃ 14.11.2024 ರಂದು ಮದ್ಯಾಹ್ನ 01.30 ಗಂಟೆಯಲ್ಲಿ ನಾನು ನಮ್ಮ ಮನೆಯ ಒಳಗಡೆ ಊಟ ಮಾಡಲು ಹೋದಾಗ ಆರೋಪಿ ಬಂದು ಕೊಲೆ ಮಾಡುವ ಉದ್ದೇಶದಿಂದ ಮನೆಯಲ್ಲಿದ್ದ ನನಗೆ ಈಗ ತೋರಿಸಿದ ಟವಲನ್ನು ತೆಗೆದುಕೊಂಡು ಕುತ್ತಿಗೆಗೆ ಸುತ್ತಿ ಅದುಮಿ ಹಿಡಿದುಕೊಂಡು ಕೊಲೆ ಮಾಡಲು ಪ್ರಯತ್ನಿಸಿದನು ಎಂದರೆ ಸರಿಯಲ್ಲ. ನಾನು ಆ ಸಂದರ್ಭದಲ್ಲಿ ಕಷ್ಟಪಟ್ಟು ತಪ್ಪಿಸಿಕೊಂಡು ಓಡಿ ಹೋದೆನು ಎಂದರೆ ಸರಿಯಲ್ಲ. ಘಟನೆಗೆ ಸಂಬಂದಿಸಿದಂತೆ ಅದೇ ದಿನ ಸಂಜೆ 06.00 ಗಂಟೆಗೆ ಆರೋಪಿಯ ವಿರುದ್ದ ಮೇಲ್ಕಂಡಂತೆ ದೂರು ನೀಡಿದ್ದೇನೆ ಎಂದರೆ

ಸರಿಯಲ್ಲ. ನನ್ನ ಗಂಡ ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿದ ಬಗ್ಗೆ ಆಲೂರು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಾಡಿದ ಕೃತ್ಯದಿಂದ ನನಗೆ ಕತ್ತಿನ ಸುತ್ತ ನೋವಿದೆ ಎಂಬುದಾಗಿ ವೈದ್ಯರ ಬಳಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

6. ಮಾರನೆ ದಿನ ಅಂದರೆ ದಿಃ 15.11.2024 ರಂದು ಪೋಲಿಸರು ಮಹಜರ ಕ್ರಮ ಜರುಗಿಸಲು ಬಂದಾಗ ನನಗೆ ಈಗ ತೋರಿಸಿದ ಟವಲನ್ನು ನಾನೇ ಪೋಲಿಸರಿಗೆ ನೀಡಿ ಸದರಿ ಟವಲಿನಿಂದ ಆರೋಪಿ ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿದ್ದಾಗಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-2 ಮಹಜರಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಹಜರ ಸಮಯದಲ್ಲಿ ನಿಪಿ-3 ಮತ್ತು 4 ರಂತೆ ಪೋಟೋಗಳನ್ನು ಚಿತ್ರೀಕರಿಸಲಾಗಿದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-3 ಮತ್ತು 4 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ರವರು ಘಟನೆಯನ್ನು ಕಣ್ಣಾರೆ ನೋಡಿದ್ದು, ಅವರೇ ನನ್ನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

7. ಅದೇ ರೀತಿ ನನಗೆ ಈಗ ಓದಿ ಹೇಳಿದಂತೆ ದಿಃ 15.11.2024 ರಂದು ನಾನು ಈ ಕೆಳಕಂಡಂತೆ ಪೋಲಿಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

" ಇತ್ತೀಚೆಗೆ ವಿನಾಕಾರಣ ಬಾಯಿಗೆ ಬಂದಂತೆ ಅವಾಚ್ಯಶಬ್ದಗಳಿಂದ ಬೈಯುವುದು --------------- ಮಂಜುನಾಥ ನೊಂದಿಗೆ ಮನೆಗೆ ಹೋಗಿರುತ್ತೇನೆಂದು ನನ್ನ ಮರು ಹೇಳಿಕೆಯನ್ನು ನೀಡಿರುತ್ತೇನೆ ".

ಸಾಕ್ಷಿಗೆ ಸದರಿ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯು ಅದನ್ನು ನಿರಾಕರಿಸಿದ್ದು, ಸದರಿ ಹೇಳಿಕೆಯ ಭಾಗವನ್ನು ಗುರುತಿನ ಸಲುವಾಗಿ ನಿಪಿ-5 ಎಂದು ಗುರುತಿಸಲಾಯಿತು.

ನಾನು ಮೇಲೆ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿದ್ದರೂ ಸಹ ಆರೋಪಿ ನನ್ನ ಗಂಡನಾದ ಕಾರಣ ಆತನಿಗೆ ಸಹಾಯ ಮಾಡಲೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎಸ್.ಪಿ.ಎ ವಕೀಲರಿಂದಃ</u>**

ಆರೋಪಿ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.